**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 14 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸ | | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಹಾಗೂ ಕರಾವಳಿ ಪ್ರದೇಶಗಳಲ್ಲಿ ಆಗಿಂದ್ದಾಗೆ ನಡೆಯುತ್ತಿರುವ ಕೋಮು ಗಲಭೆಗಳಲ್ಲಿ ಎಷ್ಟು ಜನ ಮೃತಪಟ್ಟಿದ್ದಾರೆ? (ಜಿಲ್ಲಾವಾರು ಮಾಹಿತಿ ನೀಡುವುದು) ಹಾಗೂ ಈ ಕೋಮು ಗಲಭೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಈ ರೀತಿಯ ಕೋಮು ಗಲಭೆಗಳಿಗೆ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು) | ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಹಾಗೂ ಕರಾವಳಿ ಪ್ರದೇಶಗಳಲ್ಲಿ ಆಗಿಂದ್ದಾಗೆ ನಡೆಯುತ್ತಿರುವ ಕೋಮು ಗಲಭೆಗಳಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ. ಮೃತಪಟ್ಟವರ ವಿವರ ಕೆಳಗಿನಂತಿದೆ. |

| ಕ್ರಸ | ಘಟಕ | ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ ಮತ್ತು ಕಲಂ | ಮೃತ/ ಹತ್ಯೆಯಾದವರ ವಿವರ |
|---|---|---|---|
| 1 | ಶಿವಮೊಗ್ಗ ಜಿಲ್ಲೆ | ದೊಡ್ಡಪೇಟೆ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 77/2022 ಕಲಂ 143, 147, 148, 120 (ಬಿ) 302 ಸಹಿತ 149 ಐಪಿಸಿ& 25 (1) (ಬಿ) ಆರ್ಮ್ಸ್ ಆಕ್ಟ್ 16, 18, 20, ಯುಎಪಿಎ 1967 ಆಕ್ಟ್ | ಹರ್ಷ @ ಹಿಂದು ಹರ್ಷ ಬಿನ್ ನಾಗರಾಜ |

ರಾಜ್ಯದಲ್ಲಿ ಕೋಮುಗಲಭೆಗಳನ್ನು ತಡೆಗಟ್ಟಲು ಪೊಲೀಸ್ ಇಲಾಖಾ ವತಿಯಿಂದ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗುತ್ತಿದೆ.

- ➢ ಕೋಮು ಗಲಭೆಗಳು ನಡೆಯದಂತೆ ಕೋಮು ಅತಿ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿರುತ್ತದೆ.
- ➢ ಕೋಮು ಸೌಹರ್ದತೆಗೆ ಧಕ್ಕೆ ತರುವಂತಹ ಬಾಕಿ ಇರುವ ವಿವಾದಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಜಿಲ್ಲಾಡಳಿತ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿರುತ್ತದೆ.
- ➢ ಕೋಮು ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಅನ್ಯ ಕೋಮಿನ ಜನರು ಯಾವುದಾದರೂ ಮೆರವಣಿಗೆ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ನಡೆಸುವ ವೇಳೆ ಕೋಮು ಭಾವನೆಗಳಿಗೆ ಧಕ್ಕೆಯಾಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.
- ➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮಿಟಿಂಗ್,

| | | |
|---|---|---|
| | | ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.<br>➢ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.<br>• ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.<br>• ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.<br>• ಅಂತರ್‌ರಾಜ್ಯ ಸಂಪರ್ಕಿಸಿಸುವ ಗಡಿಯಲ್ಲಿ ಚೆಕ್ ಪೋಸ್ಟ್‌ಗಳನ್ನು ಪ್ರಾರಂಬಿಸಿದ್ದು, ವಾಹನಗಳನ್ನು ಸಂಶಯಿತ ವ್ಯಕ್ತಿಗಳನ್ನು ಹಾಗೂ ಯಾರು ಶಸ್ತ್ರಾಸ್ತ್ರಗಳನ್ನು ಸಾಗಿಸುವರೊ ಅಂತಹ ವ್ಯಕ್ತಿಗಳನ್ನು ತಪಾಸಣೆ ಮಾಡಲಾಗುತ್ತಿದೆ.<br>• ಠಾಣಾ ಗುಪ್ತವಾರ್ತಾ ಸಿಬ್ಬಂದಿಯವರಿಗೆ ಮತ್ತು ಬೀಟ್ ಸಿಬ್ಬಂದಿಯವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದು, ಇವರಿಂದ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>• ಸರಹದ್ದಿನಲ್ಲಿ ನಡೆಯುವ ಎಲ್ಲಾ ಬಂದೋಬಸ್ತುಗಳಿಗೆ ಗರಿಷ್ಠ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.<br>• ಸುಧಾರಿತ ಗಸ್ತು ಪದ್ಧತಿಯನ್ನು ಜಾರಿಗೊಳಿಸಿ ಕ್ರಮ ತೆಗೆದುಕೊಳ್ಳಲಾಗಿದೆ.<br>• ಹಗಲು ಮತ್ತು ರಾತ್ರಿ ಗ್ರಾಮ ಗಸ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.<br>• ಕೋಮು ಗಲಭೆ ಹಿನ್ನಲೆಯುಲ್ಲಿ ವ್ಯಕ್ತಿಗಳ ಚಲನವಲನಗಳನ್ನು ಗಮನಿಸಲಾಗುತ್ತಿದೆ.<br>• ರೌಡಿಗಳು ಮತ್ತು ಮತೀಯ ಗೂಂಡಾಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದ್ದು ಅವರ ಚಟುವಟಿಕೆಯ ಮೇಲೆ ಸೂಕ್ತ ನಿಗಾ ಇರಿಸಲಾಗಿದೆ.<br>• ಠಾಣಾ ವ್ಯಾಪ್ತಿಯಲ್ಲಿ ಸಕ್ರಿಯವಾಗಿರುವ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳ ಚಲನವಲನಗಳನ್ನು ಹಾಗೂ ಅವರ ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಸಿಆರ್‌ಪಿಸಿ ಪ್ರಕಾರ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯಲಾಗುತ್ತಿದೆ.<br>• ದೈಹಿಕ ಹಲ್ಲೆ ನಡೆಸಿದ, ತನಿಖೆ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳಲ್ಲಿ ಭಾಗಿಯಾದ ರೌಡಿ ಆಸಾಮಿಗಳ ಮತ್ತು ಮತಿಯ ಗೂಂಡಾಗಳು ಪುನ: ದೈಹಿಕ ಹಲ್ಲೆ ಪ್ರಕರಣದಲ್ಲಿ ಭಾಗಿಯಾದರೆ ಸದರಿ ಆರೋಪಿಗಳು ಈಗಾಗಲೇ ನ್ಯಾಯಾಲಯದಿಂದ ಪಡೆದಿರುವ ಜಾಮೀನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.<br>ಕರ್ನಾಟಕ ಪೋಲೀಸ್ ಕಾಯ್ದೆ ಅನ್ವಯ ಗಡಿಪಾರು ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. |
| ಆ | ಸರ್ಕಾರದಿಂದ ಕೋಮು ಗಲಭೆಗಳಲ್ಲಿ ಮೃತಪಟ್ಟ ಕುಟುಂಬಗಳಿಗೆ ಯಾವ | ಸರ್ಕಾರದ ವತಿಯಿಂದ 01 ಪ್ರಕರಣದಲ್ಲಿ ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ. ಮಾಹಿತಿ ಕೆಳಗಿನಂತಿದೆ. |

<table>
<tr>
<td></td>
<td>ರೀತಿಯಲ್ಲಿ ಪರಿಹಾರವನ್ನು ವಿತರಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)</td>
<td>
<table>
<tr><th>ಕ್ರಸ</th><th>ಘಟಕ</th><th>ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ ಮತ್ತು ಕಲಂ</th><th>ಪರಿಹಾರದ ವಿವರ</th></tr>
<tr><td>1</td><td>ಶಿವಮೊಗ್ಗ ಜಿಲ್ಲೆ</td><td>ದೊಡ್ಡಪೇಟೆ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 77/2022 ಕಲಂ 143, 147, 148, 120 (ಬಿ) 302 ಸಹಿತ 149 ಐಪಿಸಿ& 25 (1) (ಬಿ) ಆರ್ಮ್ಸ್ ಆಕ್ಟ್ 16, 18, 20, ಯುಎಟಿಎ 1967 ಆಕ್ಟ್</td><td>ರಾಜ್ಯ ಸರ್ಕಾರದಿಂದ ಮೃತರ ಕುಟುಂಬಕ್ಕೆ ರೂಪಾಯಿ 25 ಲಕ್ಷ ಪರಿಹಾರ ಹಣವನ್ನು ನೀಡಲಾಗಿರುತ್ತಾರೆ.</td></tr>
</table>
</td>
</tr>
<tr>
<td>ಇ</td>
<td>ಕೋಮು ಗಲಭೆಗಳಿಗೆ ಕಾರಣವಾಗುತ್ತಿರುವ ಮೂಲಭೂತವಾದಿಗಳು ಮತ್ತು ಇತರ ಸಂಘಟನೆಗಳ ವಿರುದ್ಧ ಕೋಮು ಗಲಭೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? ಮೂಲಭೂತ ವಾದವನ್ನು ಪ್ರತಿಪಾದಿಸುವ ಸಂಘಟನೆಗಳು ಯಾವುವು?</td>
<td>ಕೋಮು ಗಲಭೆಗಳಿಗೆ ಕಾರಣವಾಗುತ್ತಿರುವ ಮೂಲಭೂತವಾದಿಗಳು ಮತ್ತು ಇತರ ಸಂಘಟನೆಗಳ ವಿರುದ್ಧ ಕೋಮು ಗಲಭೆಗಳನ್ನು ತಡೆಗಟ್ಟುವ ಕ್ರಮ:<br>• ಈಗಾಗಲೇ ಕೋಮು ಗಲಭೆಗಳಲ್ಲಿ ಭಾಗಿಯಾಗಿರುವ ಸಂಘಟನೆಯಲ್ಲಿರುವ ಆರೋಪಿಗಳ ವಿರುದ್ಧ ಆಯಾಯ ಠಾಣೆಗಳಲ್ಲಿ ರೌಡಿಶೀಟ್ ತೆರೆಯಲಾಗಿದೆ.<br>• ಆಗಾಗ್ಗೆ ಅವರ ಚಲನವಲನಗಳ ಮೇಲೆ ನಿಗಾ ಇಟ್ಟು ಸಿಆರ್‌ಪಿಸಿ ಅಡಿಯಲ್ಲಿ ಭದ್ರತಾ ಪ್ರಕರಣಗಳನ್ನು ದಾಖಲಿಸಲಾಗಿದೆ.<br>ಕೋಮುಗಲಭೆಗಳಿಗೆ ಕಾರಣವಾಗುವಂತಹ ಮತ್ತು ಇಂತಹ ಕೃತ್ಯಗಳಲ್ಲಿ ತೊಡಗಬಹುದಾದಂತಹ ವ್ಯಕ್ತಿಗಳು ಹಾಗೂ ಸಂಘಟನೆಗಳು ಮತ್ತು ಕೇಂದ್ರ/ರಾಜ್ಯ ಸರ್ಕಾರದಿಂದ ನಿಷೇಧಿಸಲ್ಪಟ್ಟ ಸಂಘಟನೆಗಳ ಮೇಲೆ ನಿಗಾವಹಿಸಿ ಕ್ರಮಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ಘನ ಸರ್ಕಾರವು ಪಿಎಫ್ಐ, ಮತ್ತು ಅದರ ಅಂಗ ಸಂಸ್ಥೆಗಳನ್ನು ನಿಷೇಧಿಸಲಾಗಿದೆ.</td>
</tr>
<tr>
<td>ಈ</td>
<td>ರಾಜ್ಯದಲ್ಲಿ ಯಾವ ಯಾವ ಸಂಘಟನೆಗಳನ್ನು ನಿಷೇಧಿಸಲಾಗಿದೆ?</td>
<td>ಘನ ಕೇಂದ್ರ ಸರ್ಕಾರದ, ಗೃಹ ವ್ಯವಹಾರಗಳ ಸಚಿವಾಲಯದ ಆದೇಶದಂತೆ, ನಿಷೇಧಿಸಲಾಗಿರುವ ಸಂಘಟನೆಗಳ ವಿವರ ಈ ಕೆಳಕಂಡಂತಿದೆ.:<br>Notification No.S.O.4559 (E) dated 27th september 2022, published in the Gazette of India, Extraordinary, Part-II, section-3, Sub-section(ii) dated the 28th september 2022, isssued by the Central Government, under sub-section (1) and provision to sub-section (3) of section 3 of the Unlawful Activities (Prevention) AC,1967 declaring the Popular Front of India (PFI) and its associates or affiliates or fronts including Rehab india Foundation (RIF), Campus Front of India (CFI), All India Imams Council (AIIC), National Confederation of Human Rights Organization (NCHRO), National Womens's Front, Junior Front, Empower India Foundation and Rehab Foundation, Kerala (for short PFI and its associates or affiliates or fronts') as unlawful association.<br><br>ಇದೇ ರೀತಿ ಸಿಮಿ ಮತ್ತು ಇಂಡಿಯನ್ ಮುಜಾಹಿದ್ದೀನ್ ಸಂಘಟನೆಗಳನ್ನು ಸಹ ನಿಷೇಧಿಸಲಾಗಿದೆ.</td>
</tr>
</table>

ಸಂಖ್ಯೆ: ಹೆಚ್‌ಡಿ 17 ಪಿಸಿಇ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು.